**ನಿರ್ದೇಶಕರ ಕಛೇರಿ**
ಅಲ್ಪಸಂಖ್ಯಾತರ ಕಲ್ಯಾಣ
ನಿರ್ದೇಶನಾಲಯ

**ಕರ್ನಾಟಕ ಸರ್ಕಾರ**

ದೂರವಾಣಿ:080- 22863617.
ಫ್ಯಾಕ್ಸ್: 080-22863618.
**Email: directorgokdom@gmail.com**
**Web: www.gokdom.com**
20ನೇ ಮಹಡಿ, ವಿ.ವಿ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

---

ಸಂಖ್ಯೆ:ಅಸಂನಿ/ಬಿದಾಯಿ/ಸಿಆರ್-01/2013-14

ದಿನಾಂಕ: 10.03.2014

## ಸುತ್ತೋಲೆ

**ವಿಷಯ:** ಬಿದಾಯಿ ಯೋಜನೆಯಡಿ ಅರ್ಜಿ ಪಡೆಯುವ ಅವಧಿ ಬಗ್ಗೆ.

**ಉಲ್ಲೇಖ:** ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ, ಬೆಂಗಳೂರು ರವರು ದಿ: 20.02.2014 ರಂದು ನಡೆದ ಸಭೆಯ ನಡವಳಿಗಳು

*******

ವಿಷಯಕ್ಕೆ ಸಂಬಂಧಿಸಿದಂತೆ ಬಿದಾಯಿ ಕಾರ್ಯಕ್ರಮದಡಿ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲುಡಿ 533 ಎಂಡಿಎಸ್ 2013, ದಿ: 13.11.2013ರ ಷರತ್ತು ಸಂಖ್ಯೆ: 12 ರಲ್ಲಿ ಅರ್ಜಿದಾರರು ಸಹಾಯಧನ ಮಂಜೂರಾತಿಗೆ ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಯು ನಿಗಧಿತ ಅರ್ಜಿ ನಮೂನೆ ಹಾಗೂ ಅಗತ್ಯ ದಾಖಲಾತಿಗಳು ಮದುವೆ ನಡೆಯುವ ದಿನಾಂಕದಿಂದ ಒಂದು ತಿಂಗಳ ಮುಂಚೆ ಸಲ್ಲಿಸತಕ್ಕದ್ದು. ಎಂದಿರುತ್ತದೆ. ಸದರಿ ಕಾಲಾವಕಾಶವನ್ನು ಆಡಳಿತಾತ್ಮಕ ಹಿತದೃಷ್ಠಿಯಿಂದ ನಿಗಧಿಪಡಿಸಲಾಗಿದೆ. ಆದರೆ ಬಹಳ ಜಿಲ್ಲೆಗಳಿಂದ ಒಂದು ತಿಂಗಳು ಮುಂಚಿತವಾಗಿ ಅರ್ಜಿಯನ್ನು ಸಲ್ಲಿಸದೇ ಇರುವುದನ್ನು ಪರಿಗಣಿಸುವ ಬಗ್ಗೆ ಸ್ಪಷ್ಠೀಕರಣವನ್ನು ಕೋರಿರುತ್ತಾರೆ. ಆದುದರಿಂದ, ಜಿಲ್ಲೆಗೆ ನಿಗಧಿಪಡಿಸಿದ ಗುರಿಯನ್ನು ಪರಿಗಣಿಸಿ, ಅರ್ಜಿದಾರರು ಮದುವೆಗೆ ಒಂದು ತಿಂಗಳ ಮುಂಚಿತವಾಗಿ ಸಲ್ಲಿಸುವ ಬದಲು ಮದುವೆ ದಿನಾಂಕದ ಒಂದು ವಾರ ಮುಂಚಿತವಾಗಿ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಸಹ ಪರಿಗಣಿಸುವುದು.

10/3

(ಅಕ್ರಂ ಪಾಷ)
**ನಿರ್ದೇಶಕರು,**
**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,**
**ಬೆಂಗಳೂರು.**

**ಪ್ರತಿಯನ್ನು:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸಸೌಧ, ಬೆಂಗಳೂರು.
2) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
3) ರಾಜ್ಯದ ಎಲ್ಲಾ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳಿಗೆ,
4) ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳಿಗೆ.